# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ

## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-14

Cw-27

| | |
|---|---|
| ಸಾಕ್ಷಿದಾರರ ಹೆಸರುಃ | ಭೀಮನಗೌಡ ಪಾಟೀಲ್ |
| ತಂದೇ/ಗಂಡನ ಹೆಸರುಃ | ವೆಂಕನಗೌಡ |
| ವಯಸ್ಸುಃ | 61 ವರ್ಷ |
| ಉದ್ಯೋಗಃ | ನಿವೃತ್ತ ನೌಕರ |
| ವಾಸ ಸ್ಥಳಃ | ಹುಬ್ಬಳ್ಳಿ |

ದಿನಾಂಕ:**12.11.2024** ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

2000 ರಿಂದ 2023 ರವರೆಗೆ ಪಿಡಬ್ಲ್ಯೂಡಿ ಹಾವೇರಿಯಲ್ಲಿ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಹಾವೇರಿ ಡಿವೈಎಸ್ಪಿಯವರು ದಿನಾಂಕಃ18.03.2021 ರಂದು ನನಗೆ ಘಟನೆ ನಡೆದ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಕೇಳಿದ್ದು, ಆ ಪ್ರಕಾರ ನಾನು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ನಕ್ಷೆ ತಯಾರಿಸಿ ಕೊಟ್ಟಿರುತ್ತೇನೆ. ನಕಾಶೆಯನ್ನು ನಿಪಿ-59, ಸಾಕ್ಷಿ ಸಹಿ ನಿಪಿ-59(ಎ) ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ

ನಿಪಿ-59 ಸ್ಕೇಲ್ ಗೆ ಅನುಗುಣವಾಗಿಲ್ಲ. ಸ್ಕೇಲ್ ಗೆ ಅನುಗುಣವಾಗಿ ಸ್ಕೆಚ್ ತಯಾರಿಸಿಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಕಾಶೆಯನ್ನು ಕಚೇರಿಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿ. ಸ್ಥಳದಲ್ಲಿ ಬರೆದುಕೊಂಡು ಬಂದ ಬಗ್ಗೆ ಕಚ್ಚಾ ನಕಾಶೆ ಹಾಜರುಮಾಡಿಲ್ಲ. ಸ್ಥಳ ತೋರಿಸಿದವರ ಸಹಿ ತೆಗೆದುಕೊಳ್ಳಲು ತೊಂದರೆ ಇರಲಿಲ್ಲ. ಕಚ್ಚಾ ನಕ್ಷೆಯಲ್ಲಿ ಮೀಟರ್ ಅಥವಾ ಸೆಂ.ಮೀ ಅಂತಾ ನಮೂದು ಮಾಡಿಲ್ಲ. ಅಳತೆಯನ್ನು ಸ್ಕೆಚ್ ನಲ್ಲಿ ನಮೂದು ಮಾಡಿಲ್ಲ. ಪೊಲೀಸರು ತಯಾರಿಸಿಕೊಂಡು ಬಂದ ಕಚ್ಚಾ ನಕಾಶೆ ನನಗೆ ತೋರಿಸಿಲ್ಲ. ಅಕ್ಕ-ಪಕ್ಕದಲ್ಲಿರುವ ಗುರುತುಗಳನ್ನು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ.

ನಮ್ಮ ಇಲಾಖೆಯಲ್ಲಿ ಒಂದೊಂದ್ದಕ್ಕೆ ಒಂದು ಸಿಂಬಲ್ ಇರುತ್ತದೆ ಎಂದರೆ ಸರಿ. ಎಲೆಕ್ಟ್ರಿಕ್ ಪೋಲ್ ಸಿಂಬಲ್ ತೋರಿಸಿಲ್ಲ. ಕಾಂಪ್ಲೆಕ್ಸ್ ಹತ್ತಿರ ಗಿಡ ಇರುವ ಬಗ್ಗೆ ತೋರಿಸಿಲ್ಲ. ಚಕ್ಕುಬಂಧಿ ಬರೆದಿಲ್ಲ, ಬರೆಯಲು ತೊಂದರೆ ಇರಲಿಲ್ಲ. ½ ತಿಂಗಳಾದ ನಂತರ ನಕ್ಷೆ ತಯಾರಿಸಿಕೊಟ್ಟಿದ್ದೇನೆ ಎಂದರೆ ಸರಿ. ವಸ್ತುಸ್ಥಿತಿಯನ್ನು ಮರೆಮಾಚಿ ನಕ್ಷೆ ತಯಾರಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸ್ಥಳಕ್ಕೆ ಭೇಟಿ ನೀಡದೇ ನಿಪಿ-59 ನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.